# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು (ಚಾಮರಾಜಪೇಟೆ) ರವರ ಕಛೇರಿ, ನಗರಪಾಲಿಕೆಯ ವಾಣಿಜ್ಯ ಸಂಕೀರ್ಣ, ಜೆ.ಸಿ.ರಸ್ತೆ, ಬೆಂಗಳೂರು.

ಸಂಖ್ಯೆ: ಕಾ.ಪಾ.ಅ(ಚಾ.ಪೇ)WO/ 182/12-13

ದಿನಾಂಕ: 25/02/2013

"ಕಾರ್ಯಾದೇಶ ಪತ್ರ"

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯದ ವ್ಯಾಪ್ತಿಯ ಪ್ಯಾಕೇಜ್ W-13, ವಾರ್ಡ್ ಸಂಖ್ಯೆ-140 ಮತ್ತು 141ಕ್ಕೆ ಆಹ್ವಾನಿಸಿರುವ ಘನತ್ಯಾಜ್ಯ ನಿರ್ವಹಣೆಗೆ ಕಾರ್ಯಾದೇಶ ನೀಡುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಪತ್ರ ಸಂಖ್ಯೆ: ನಅಇ 745 ಎಂ.ಎನ್.ವೈ 12 ದಿ: 18/09/2012.
2. ಮಾನ್ಯ ಆಯುಕ್ತರ ಆದೇಶ ಪತ್ರದ ಸಂಖ್ಯೆ: ಆಯುಕ್ತರು/ಪಿ.ಎಸ್.ಆರ್/(4)6544/2012-13, ದಿ: 18/09/2012.
3. ರಾಜ್ಯ ಟೆಂಡರ್ ಬುಲೇಟಿನ್ ಪತ್ರದ ಸಂಖ್ಯೆ, ನಅಇ/748/ ಎಂ.ಎನ್.ವೈ /2012, ದಿನಾಂಕ: 21/9/2012.
4. ಟೆಂಡರ್ ಅಧಿಸೂಚನೆ ಸಂ: (SE(W)/Tender/14/12-13)ದಿ:18/12/2012.
5. ಪತ್ರಿಕಾ ಪ್ರಕಟಣೆ ದಿನಾಂಕ: 19/9/2012.
6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ತೀರ್ಮಾನದ ಅಧಿಕ ವಿಷಯದ ಸಂ:01(279), 02(280), 03(281), 04(282), 05(283), 06(284), 07(285), 08(286)/12-13, ದಿ:30/10/2012.
7. ಈ ಕಛೇರಿಯ ಒಪ್ಪಿಗೆ ಪತ್ರದ ಸಂಖ್ಯೆ. ಕಾ.ಪಾ.ಅ(ಚಾ.ಪೇ)/ಪಿ.ಆರ್/501/12-13, ದಿನಾಂಕ: 03/11/12.
8. ಬ್ಯಾಂಕ್ ಆಫ್ ಮಹಾರಾಷ್ಟ್ರ, ಪುಣೆ ಮುಖ್ಯ ಶಾಖೆ ರವರ ದಿನಾಂಕ: 19/11/2012 ರಂತೆ ನೀಡಿರುವ ಕಾರ್ಯಾಧಾರಿತ ಭದ್ರತಾ ಠೇವಣಿ ರೂ. 4,07,387/-(ನಾಲ್ಕು ಲಕ್ಷದ ಏಳು ಸಾವಿರದ ಮೂರು ನೂರ ಎಂಭತ್ತೇಳು)ಗಳಿಗೆ ದಿ: 25/02/2016 ರವರೆಗೆ ಚಾಲನೆಯಲ್ಲಿರುವಂತೆ.
9. ತಮ್ಮ ಪತ್ರದ ದಿನಾಂಕ: 04/02/2013, 11/01/2013, ಮತ್ತು 15/01/2013.
10. ಸರ್ಕಾರದ ಆದೇಶ ಸಂಖ್ಯೆ. ನಅಇ 793 ಎಂ.ಎನ್.ವೈ 12 ದಿನಾಂಕ: 21/11/12.
11. ಘನತ್ಯಾಜ್ಯ ನಿರ್ವಹಣೆಯ ಸಂಬಂಧ ದಿ: 4/3/2013 ರಿಂದ ಜಾರಿಗೆ ಬರುವಂತೆ ಮಾಡಿಕೊಂಡಿರುವ ಒಡಂಬಡಿಕೆ ಪತ್ರ ಸಂಖ್ಯೆ. EE/Chpt/AGREE/ 184/12-13.

-*-*-*-

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳ ರೀತ್ಯಾ ಗುತ್ತಿಗೆ ಷರತ್ತು ಮತ್ತು ನಿಬಂಧನೆಗಳಂತೆ ಘನತ್ಯಾಜ್ಯ ನಿರ್ವಹಣೆ (ಸಂಗ್ರಹಣೆ ಮತ್ತು ಸಾಗಣೆ) ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯ ವ್ಯಾಪ್ತಿಯ ಪ್ಯಾಕೇಜ್ ಸಂಖ್ಯೆ. W-13, ವಾರ್ಡ್ ಸಂಖ್ಯೆ-140 ಮತ್ತು 141 ರ ವಾರ್ಡ್‌ಗಳ ಚಾಮರಾಜಪೇಟೆ ಉಪವಿಭಾಗದಲ್ಲಿ ತಮ್ಮ ಗುತ್ತಿಗೆಯು ಅಂಗೀಕೃತವಾಗಿರುತ್ತದೆ. ತಾವು ನೀಡಿರುವ ಕಾರ್ಯಯೋಜನೆಯಂತೆ ಪ್ರತಿ ದಿನ ಘನತ್ಯಾಜ್ಯ ನಿರ್ವಹಣೆ ಕಾರ್ಯನಿರ್ವಹಿಸಲು ಮಾಸಿಕ ಗುತ್ತಿಗೆ ಮೊತ್ತ ರೂ. 16,97,446/- ರಂತೆ (ಹದಿನಾರು ಲಕ್ಷದ ತೊಂಭತ್ತೇಳು ಸಾವಿರದ ನಾಲ್ಕು ನೂರ ನಲವತ್ತಾರು ಮಾತ್ರ) ತಮಗೆ ದಿನಾಂಕ: 04/03/2013 ರಿಂದ ಜಾರಿಗೆ ಬರುವಂತೆ ಕಾರ್ಯಾದೇಶ ನೀಡಲಾಗಿದೆ. ಸದರಿ ಕಾರ್ಯಾದೇಶವು ದಿನಾಂಕ: 25/02/2013 ರಿಂದ ದಿನಾಂಕ: 24/02/2015 ರವರೆಗೆ ಚಾಲ್ತಿಯಲ್ಲಿರುತ್ತದೆ.

**ಕಾರ್ಯಯೋಜನೆ ಒದಗಿಸಬೇಕಾದ ಸಿಬ್ಬಂದಿ, ವಾಹನ ಮತ್ತು ಸಲಕರಣೆಗಳು**

1. ಪೌರ ಕಾರ್ಮಿಕರು (ಪ್ರತಿ ಕಾರ್ಮಿಕರ ಜೊತೆ ಒಂದು ತಳ್ಳುವ ಗಾಡಿ ಇರಬೇಕು)
   Street Sweeping & Open area : 35 ಸಂಖ್ಯೆ
2. ಮೇಲ್ವಿಚಾರಕರು : 04 ಸಂಖ್ಯೆ
3. ಮನೆ ಮನೆಯಿಂದ ತಳ್ಳುವ ಗಾಡಿ ಮೂಲಕ ಕಸ ಸಂಗ್ರಹಿಸುವ ಪೌರ ಕಾರ್ಮಿಕರು : 10 ಸಂಖ್ಯೆ
4. ಆಟೋಟಿಪ್ಪರ್ (ಪ್ರತಿ ಆಟೋ ಜೊತೆ ಒಬ್ಬ ಡ್ರೈವರು ಮತ್ತು ಒಬ್ಬ ಹೆಲ್ಪರ್) : 14 ಸಂಖ್ಯೆ
5. ಟಿಪ್ಪರ್ ಲಾರಿ (ಪ್ರತಿ ಲಾರಿಗೆ ಒಬ್ಬ ಡ್ರೈವರು ನಾಲ್ಕು ಜನ ಹೆಲ್ಪರ್) : 04 ಸಂಖ್ಯೆ
6. ಕಾಂಪ್ಯಾಕ್ಟರ್ (ಪ್ರತಿ ಕಾಂಪ್ಯಾಕ್ಟರ್‌ಗೆ ಒಬ್ಬ ಡ್ರೈವರು ಮತ್ತು ಒಬ್ಬ ಹೆಲ್ಪರ್) : 01 ಸಂಖ್ಯೆ
7. ಕಾರ್ಮಿಕರ ಸಮವಸ್ತ್ರ ಮತ್ತು ಭದ್ರತಾ, ಸ್ವಚ್ಛತಾ ನಿರ್ವಹಣೆ ಸಲಕರಣೆಗಳು.

ಗುತ್ತಿಗೆದಾರರು ಮೊದಲನೆ ಮಾಹೆಯ ಕೆಲಸಕ್ಕೆ ಬಿಲ್ ಸಲ್ಲಿಸುವ ಸಮಯದಲ್ಲಿ ಎಲ್ಲಾ ಕಾರ್ಮಿಕರಿಗೆ ಮಾಸಿಕ ವೇತನವನ್ನು ಚೆಕ್/ಇ.ಸಿ.ಎಸ್/ನೇರವಾಗಿ ಬ್ಯಾಂಕ್ ಖಾತೆಗೆ ಪಾವತಿಸಿರುವ ಬಗ್ಗೆ, ಇ.ಎಸ್.ಐ ಮತ್ತು ಪಿ.ಎಫ್. ನೊಂದಣಿ ಮಾಡಿಸಿರುವ ಹಾಗೂ ವಂತಿಕೆ ಪಾವತಿಸಿರುವ ಚಲನ್‌ನ ನಕಲು ಪ್ರತಿಯನ್ನು ಒದಗಿಸುವುದು ಹಾಗೂ ಇದೇ ಕ್ರಮವನ್ನು ಪ್ರತಿ ತಿಂಗಳು ಅನುಸರಿಸಲು ಸೂಚಿಸಲಾಗಿದೆ. ಕಾರ್ಮಿಕರಿಗೆ ಪಿ.ಎಫ್. ವಂತಿಕೆ ಪಾವತಿಸುವ ಕಾರ್ಯವನ್ನು ಆನ್‌ಲೈನ್‌ಗೆ ಅಳವಡಿಸಲು ತಿಳಿಸಿದೆ. ಹಾಗೂಗುತ್ತಿಗೆದಾರರು ಪ್ರತಿ ದಿನ ಸಂಬಂಧಪಟ್ಟ ಅಧಿಕಾರಿಗಳಿಗೆ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಹಾಜರಾತಿ ವಾಹನ ಸಂಖ್ಯೆ ಹಾಗೂ ಕೆಲಸದ ಪ್ರಗತಿಯ ವರದಿಯನ್ನು ಸಲ್ಲಿಸಲು ಸೂಚಿಸಿದೆ.

ಈ ಕಾರ್ಯಾದೇಶವು ಗುತ್ತಿಗೆ ಕರಾರು ಷರತ್ತು ಮತ್ತು ನಿಬಂಧನೆಗಳು, RFP ದಾಖಲಾತಿಯಲ್ಲಿ ನಿಗಧಿಪಡಿಸಿರುವ ಷರತ್ತಿನಂತೆ, ಹಾಗೂ ಇನ್ನು ಮುಂದೆ ಘನತ್ಯಾಜ್ಯ ನಿರ್ವಹಣೆ ಕಾರ್ಯಕ್ಕೆ ಸಂಬಂಧಿಸಿದಂತೆ ಪಾಲಿಕೆಯು ಆಗಿಂದಾಗ್ಗೆ ಕಛೇರಿ ಆದೇಶ/ ಸುತ್ತೋಲೆಯಲ್ಲಿ ನೀಡುವ ಎಲ್ಲಾ ಸಲಹೆ / ಸೂಚನೆಗಳಿಗೆ ಒಳಪಟ್ಟಿರುತ್ತದೆ.

ಕಾರ್ಯಪಾಲಕ ಅಭಿಯಂತರರು / Executive Engineer
ಚಾಮರಾಜಪೇಟೆ ವಿಭಾಗ / Chamarajpet Division
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ / Bruhat Bangalore Mahanagara Palike
Bangalore

ಇವರಿಗೆ:-
ಶ್ರೀ ಪ್ರಸನ್ನ ಶಾಸ್ತ್ರಿ, ಉಪ ಅಧ್ಯಕ್ಷರು,
ಮೆಸರ್ಸ್: ಬಿ.ವಿ.ಜಿ ಇಂಡಿಯಾ (ಪ್ರೈ) ಲಿಮಿಟೆಡ್
ಬಿ.ವಿ.ಜಿ. ಹೌಸ್, ನಂ. 47, ಮಿಲ್ಲರ್ಸ್ ಟ್ಯಾಂಕ್ ಬಂಡ್ ರೋಡ್,
ವಸಂತನಗರ, ಬೆಂಗಳೂರು-560 052.

**ಪ್ರತಿಯನ್ನು:-**

1. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಪೂಜ್ಯ ಮಹಾಪೌರರ ಗಮನಕ್ಕೆ ತರಲು ಕೋರಲಾಗಿದೆ.
2. ಮಾನ್ಯ ಉಪ ಮಹಾಪೌರರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಪೂಜ್ಯ ಮಹಾಪೌರರ ಗಮನಕ್ಕೆ ತರಲು ಕೋರಲಾಗಿದೆ.
3. ಮಾನ್ಯ ಆಯುಕ್ತರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮಾನ್ಯ ಅಧ್ಯಕ್ಷರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
5. ಮಾನ್ಯ ವಿಸೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಮಾನ್ಯ ಅಪರ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗಾಗಿ ಸಲ್ಲಿಸಿದೆ.
7. ಮಾನ್ಯ ಅಪರ /ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗಾಗಿ ಸಲ್ಲಿಸಿದೆ.
8. ಮುಖ್ಯ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗಾಗಿ ಸಲ್ಲಿಸಿದೆ.
9. ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗಾಗಿ ಸಲ್ಲಿಸಿದೆ.
10. ಸಹಾಯಕ ನಿಯಂತ್ರಕರು (ಹಣಕಾಸು-ಪಶ್ಚಿಮ) ರವರ ಅವಗಾಹನೆಗಾಗಿ ಸಲ್ಲಿಸಿದೆ.
11. ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
12. ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

---

ಸಂ: ಅ.ಅ.(ಪ)/ಕಾ.ಆ/ಪಿಆರ್/ 59 /2012-13

ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಕಛೇರಿ,
ಭೂಮಿಷ್ಯಂ ಪಾರ್ಕ್, ಸೌತ್ ಸೆಂಟ್ರಲ್ ಸ್ಟ್ರೀಟ್,
ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20
ದಿನಾಂಕ: 12-10-2012

## ಪರಿಷ್ಕೃತ ಕಾರ್ಯಾದೇಶ-3

ವಿಷಯ : ವಾಡ್ ಸಂಖ್ಯೆ: 140ರಲ್ಲಿ ಈ ಹಿಂದೆ ಒದಗಿಸಿದ್ದ ಸಾರ್ವಜನಿಕ ಮೂತ್ರಾಲಯ ಮತ್ತು ಶೌಚಾಲಯಗಳನ್ನು ನೀರಿನ ಟ್ಯಾಂಕರನ್ನು ಉಪಯೋಗಿಸಿಕೊಂಡು ಸ್ವಚ್ಛಗೊಳಿಸಲು ಪರ್ಯಾಯವಾಗಿ (ಬದಲಿಗೆ) ನಿಯೋಜಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಕಾರ್ಯಾದೇಶ ಸಂಖ್ಯೆ: ಅ.ಅ.(ಪ)/ಪಿಆರ್/194/11-12, ದಿನಾಂಕ: 4-10-2011
2. ಈ ಕಛೇರಿ ಕಾರ್ಯಾದೇಶ-2 ರ ಸಂಖ್ಯೆ: ಅ.ಅ(ಪ)/ಪಿಆರ್/43/12-13, ದಿನಾಂಕ: 25-05-2012
3. ಅಪರ ಆಯುಕ್ತರು (ಪಶ್ಚಿಮ)ರವರ ದಿನಾಂಕ: 28-09-2012ರ ಆದೇಶ.

***********

ಪಶ್ಚಿಮ ವಲಯದ ವಾರ್ಡ್ ಸಂಖ್ಯೆ: 46, 47, 48 ರಲ್ಲಿ ಸಾರ್ವಜನಿಕ ಮೂತ್ರಾಲಯ ಮತ್ತು ಶೌಚಾಲಯಗಳನ್ನು ನೀರಿನ ಟ್ಯಾಂಕರನ್ನು ಉಪಯೋಗಿಸಿಕೊಂಡು ಸ್ವಚ್ಛಗೊಳಿಸುವ ಕೆಲಸ ನಿರ್ವಹಿಸುತ್ತಿರುವ ಗುತ್ತಿಗೆದಾರರಾದ ಶ್ರೀ. ಕೆ. ಶಿವಕುಮಾರ್ ರವರಿಗೆ ಉಲ್ಲೇಖ (2)ರಂತೆ ಗುತ್ತಿಗೆ ಆಧಾರದ ಮೇಲೆ ಕಾರ್ಯಾದೇಶ ನೀಡಲಾಗಿತ್ತು, ಆದರೆ ವಾರ್ಡ್ ಸಂಖ್ಯೆ: 47 ಮತ್ತು 48 ಗಳು ದಕ್ಷಿಣ ವಲಯಕ್ಕೆ ಸೇರುವುದರಿಂದ ಸದರಿ ವಾರ್ಡ್‌ಗಳ ಸಾರ್ವಜನಿಕ ಶೌಚಾಲಯ/ಮೂತ್ರಾಲಯಗಳ ಬಗ್ಗೆ ದಕ್ಷಿಣ ವಲಯದಲ್ಲಿ ಕ್ರಮತೆಗೆದುಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಸದರಿ ಗುತ್ತಿಗೆಯನ್ನು ಉಲ್ಲೇಖ (3)ರ ಅಪರ ಅಯುಕ್ತರು (ಪಶ್ಚಿಮ)ರವರ ಆದೇಶದನ್ವಯ ಉಲ್ಲೇಖ (2)ರ ಕಾರ್ಯಾದೇಶವನ್ನು ರದ್ದುಪಡಿಸಿ, ಪರ್ಯಾಯವಾಗಿ (ಬದಲಿಗೆ) ಪಶ್ಚಿಮ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ: 140 (ಹಳೇ ವಾರ್ಡ್ ಸಂಖ್ಯೆ: 46)ರ ಸಾರ್ವಜನಿಕ ಮೂತ್ರಾಲಯ ಮತ್ತು ಶೌಚಾಲಯಗಳನ್ನು ನೀರಿನ ಟ್ಯಾಂಕರನ್ನು ಉಪಯೋಗಿಸಿಕೊಂಡು ಸ್ವಚ್ಛಗೊಳಿಸುವ ಕಾರ್ಯಕ್ಕಾಗಿ ಗುತ್ತಿಗೆದಾರರಾದ ಶ್ರೀ. ನಾಗೇಶ್ವರ ರಾವ್ ಅಪರ ಆಯುಕ್ತರು (ಪಶ್ಚಿಮ)ರವರ ಆದೇಶದಂತೆ ಪ್ರತಿ ತಿಂಗಳಿಗೆ ರೂ. 42000/-ಗಳಂತೆ (ನಲವತ್ತೆರಡು ಸಾವಿರ ರೂಪಾಯಿಗಳು ಮಾತ್ರ) ನಿಗದಿಪಡಿಸಿ, ದಿನಾಂಕ: 16-10-2012 ರಿಂದ ಅನ್ವಯವಾಗುವಂತೆ ಟೆಂಡರ್ ಕರೆಯುವವರೆಗೆ ಅಥವಾ ಮುಂದಿನ ಆದೇಶದವರೆಗೆ ಈ ಕೆಳಕಂಡ ಷರತ್ತಿನೊಂದಿಗೆ ತಾತ್ಕಾಲಿಕವಾಗಿ ನಿಯೋಜಿಸಿ ಆದೇಶಿಸಲಾಗಿದೆ. ಇದೊಂದು ಪರ್ಯಾಯ (ಬದಲಿ) ವ್ಯವಸ್ಥೆಯಾಗಿದ್ದು, ಹೆಚ್ಚಿನ ಆರ್ಥಿಕ ಹೊರೆ ಇರುವುದಿಲ್ಲ.

### ಷರತ್ತುಗಳು

1. ಗುತ್ತಿಗೆದಾರರು ಕೆಲಸಕ್ಕಾಗಿ ನೇಮಕ ಮಾಡಿಕೊಳ್ಳುವ ವ್ಯಕ್ತಿಗಳಿಗೆ ಕನಿಷ್ಟ ವಯಸ್ಸು 18ವರ್ಷ ತುಂಬಿರಬೇಕು ಹಾಗೂ 55 ವರ್ಷ ಮೀರಿರಬಾರದು, ಆರೋಗ್ಯ ಮತ್ತು ಸಧೃಢ ಕಾರ್ಮಿಕರನ್ನು ಮಾತ್ರ ನೇಮಿಸತಕ್ಕದ್ದು, 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು.
2. ಕೇವಲ 2 ಪುರುಷ ಕೆಲಸಗಾರರನ್ನು ಮಾತ್ರ ನೇಮಿಸತಕ್ಕದ್ದು, ಆದರೆ ಪಾಲಿಕೆಯ ಪೌರಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಕೊಳ್ಳಬಾರದು.
3. ಕೆಲಸಗಾರರಿಗೆ ನೇರಳೆ ಬಣ್ಣದ ಮೇಲು ಹೊದಿಕೆ (ಏಪ್ರಾನ್) ಒದಗಿಸತಕ್ಕದ್ದು.
4. ಸ್ವಚ್ಛಗೊಳಿಸುವ ಕೆಲಸಕ್ಕೆ ವಾಟರ್ ಟ್ಯಾಂಕರ್ ಗೈರುಹಾಜರಾದಲ್ಲಿ ಮಾಸಿಕ ಮೊತ್ತದ ಬಿಲ್ಲಿನಲ್ಲಿ ಸರಾಸರಿ ದಿನದ ಲೆಕ್ಕ ಹಾಕಿ ಆ ದಿನದ ಮೊತ್ತವನ್ನು ಕಟಾವು ಮಾಡಲಾಗುವುದು.

ಮು.ತಿ.ನೋ.

5. ಸಾರ್ವಜನಿಕರಿಂದ ಸ್ವಚ್ಛತೆ ಬಗ್ಗೆ ಯಾವುದೇ ದೂರು ಬಾರದಂತೆ ನೋಡಿಕೊಳ್ಳುವುದು.
6. ವಾಹನದ ಮುಂದೆ ವಾಹನದ ಸಂಖ್ಯೆ, ವಾರ್ಡ್ ಸಂಖ್ಯೆ, ವಲಯದ ಹಾಗೂ ಬಿ.ಬಿ.ಎಂ.ಪಿ. ಎಂದು ಕಡ್ಡಾಯವಾಗಿ ಬರೆಯಬೇಕು.
7. ಪ್ರತಿನಿತ್ಯ ವಾರ್ಡ್‌ಗಳಲ್ಲಿ ಸಾರ್ವಜನಿಕ ಶೌಚಾಲಯ ಹಾಗೂ ಮೂತ್ರಾಲಯವನ್ನು ಬ್ಲೀಚಿಂಗ್ ಪೌಡರ್‌ನಿಂದ ಸ್ವಚ್ಛಗೊಳಿಸುವುದು ಹಾಗೂ 10 ದಿನಗಳಿಗೊಮ್ಮೆ ಆಸಿಡ್‌ನಿಂದ ಸ್ವಚ್ಛಗೊಳಿಸುವುದು.
8. ಕೆಲಸ ನಿರ್ವಹಿಸುವ ಪೂರ್ಣ ಜವಾಬ್ದಾರಿ ಗುತ್ತಿಗೆದಾರರದ್ದಾಗಿರುತ್ತದೆ.
9. ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದಲ್ಲಿ ಗುತ್ತಿಗೆದಾರರನ್ನು ಯಾವುದೇ ಮುನ್ಸೂಚನೆ ಇಲ್ಲದೆ ರದ್ದುಗೊಳಿಸಲಾಗುವುದು.

12/10/12

ಅಧೀಕ್ಷಕ ಅಭಿಯಂತರರು (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ,

ಶ್ರೀ. ನಾಗೇಶ್ವರ ರಾವ್,
ನಂ. 50, ಹೆಚ್ ಬ್ಲಾಕ್,
ಹಳೇ ಸವಾರ್ ಲೇನ್, ಶೇಷಾದ್ರಿಪುರಂ,
ಬೆಂಗಳೂರು – 560 020.

ಪ್ರತಿಯನ್ನು,

1. ಅಪರ ಆಯುಕ್ತರು (ಪಶ್ಚಿಮ)ರವರ ಅವಗಾಹನೆಗೆ ಸಲ್ಲಿಸಿದೆ.
2. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಚಾಮರಾಜಪೇಟೆ ಉಪ–ವಿಭಾಗರವರ ಮಾಹಿತಿಗಾಗಿ.
3. ಸಹಾಯಕ ಹಣಕಾಸು ನಿಯಂತ್ರಕರು (ಪಶ್ಚಿಮ)ರವರ ಮಾಹಿತಿಗಾಗಿ ರವಾನಿಸಿದೆ.